



ಕುಡಿದು ಮನೆಗೆ ಬಂದ ಪತಿ ತಾನು ಕುಡಿದು ಬಂದದ್ದು ತನ್ನ ಪತ್ನಿಗೆ ತಿಳಿಯಬಾರದೆಂದು ಲ್ಯಾಪ್‌ಟಾಪ್ ತೆಗೆದುಕೊಂಡು ಕೆಲಸ ಮಾಡುತ್ತಿರುವವನಂತೆ ನಟಿಸತೊಡಗಿದ. ಆದರೂ ಪತ್ನಿಗೆ ಸಂಶಯ ಬಂದು 'ಕುಡಿದು ಬಂದಿದ್ದಿಯಾ?' ಎಂದು ಕೇಳಿದಳು.

'ಇಲ್ಲವಲ್ಲ' ಎಂದ ಪತಿ.

'ಹಾಗಾದರೆ ಖಾಲಿ ಬ್ರೀಫ್‌ಕೇಸ್ ತೆರೆದುಕೊಂಡು ಅದೇನನ್ನು ಟೈಪ್ ಮಾಡುತ್ತಿರುವೆ' ಎಂದು ಕೇಳಿದಳು ಪತ್ನಿ.

★★★

ಒಬ್ಬ ಬಾಸ್ ಆಫೀಸಿನಲ್ಲಿ ತುಂಬ ಸ್ಟ್ರಿಕ್ಟ್ ಆಗಿದ್ದ. ಒಮ್ಮೆ ಅವನ ಕೈಕೆಳಗಿನ ಸಿಬ್ಬಂದಿಯೊಬ್ಬ 'ಬಾಸ್, ಆಫೀಸಿನಲ್ಲಿ ನೀವು ಸಿಂಹದ ಹಾಗೆ ಇರುತ್ತೀರಿ. ಎಲ್ಲರೂ ನಿಮ್ಮನ್ನು ಕಂಡರೆ ಹೆದರುತ್ತಾರೆ. ಮನೆಯಲ್ಲಿಯೂ ನೀವು ಸಿಂಹದ ಹಾಗೆಯೇ ಇರುತ್ತೀರಾ ಸಾರ್?' ಎಂದು ಕೇಳಿದ.

'ಹೌದು, ಮನೆಯಲ್ಲಿಯೂ ನಾನು ಸಿಂಹದ ಹಾಗೆಯೇ ಇರುತ್ತೇನೆ. ಆದರೆ ವ್ಯತ್ಯಾಸವೇನೆಂದರೆ ಆ ಸಿಂಹದ ಮೇಲೆ ಕಾಳಿಕಾ ಮಾತೆ ಕುಳಿತಿರುತ್ತಾಳೆ' ಎಂದ ಬಾಸ್.

(ಸಂಗ್ರಹ) **ಮುರಲೀಧರ ಕುಲಕರ್ಣಿ, ಬೀದರ್**

### ಒಂದು ಬಾಲಿಗೆ ಹತ್ತು ರನ್ನು!

ರಜನಿಕಾಂತ್ 20–ಟ್ವೆಂಟಿ ಕ್ರಿಕೆಟ್ ಆಡ್ತಿದ್ರಾನೆ. ಇನ್ನು ಒಂದು ಬಾಲಿರುತ್ತೆ, ಆದರೆ ಹತ್ತು ರನ್ನು ಬೇಕಿರುತ್ತೆ. ಆದ್ರೂ ಅವನು ಗೆಲ್ತಾನೆ. ಹೇಗಂತಿರಾ....

ಕಡೆಯ ಬಾಲನ್ನು ರಜನೀಕಾಂತ್ ಹೊಡೆದಾಗ ಬಾಲ್ ಎರಡು ತುಂಡಾಗಿ ಒಂದು ಪೀಸ್ ಸಿಕ್ಸರ್ ಮತ್ತೊಂದು ಪೀಸ್ ಬೌಂಡರಿಗೆ ಹೋಗುತ್ತೆ.

★★★

### ಕಾಯಿನ್ ಬಾಕ್ಸ್

ಶಿಂಗ್ರೀಕ ದೇವಸ್ಥಾನದಲ್ಲಿ ಜನರು ಹುಂಡಿಗೆ ದುಡ್ಡು ಹಾಕಿ, ಏನೋ ಪ್ರಾರ್ಥನೆ ಮಾಡುವುದನ್ನು ನೋಡ್ದ. 'ಅಯ್ಯೋ ದೇವ್ರೆ, ಕಾಯಿನ್ ಬಾಕ್ಸಲ್ಲಿ ದುಡ್ಡು ಹಾಕಿ ರಿಸೀವರ್ ಇಲ್ದೇನೇ ಮಾತಾಡ್ತಿದಾರಲ್ಲ ಪೆದ್ದುಗಳು' ಅಂದ್ಕೊಂಡ!

(ಸಂಗ್ರಹ) **ಕೆ.ಪಿ.ಸತ್ಯನಾರಾಯಣ, ಹಾಸನ**

ಬಂಟಿ ಚಪಾತಿಯ ಒಂದು ತುಣುಕನ್ನು ತಾನು ತಿನ್ನುತ್ತಾ ಇನ್ನೊಂದು ತುಣುಕನ್ನು ಕೋಳಿಗೆ ತಿನ್ನಲು ಕೊಡುತ್ತಿದ್ದ.

ಇದನ್ನೇ ನೋಡುತ್ತಿದ್ದ ಬಂಟಿಯ ತಂದೆ ಕೇಳಿದರು 'ಏನೋ ಮಾಡ್ತಿದ್ದೀಯ ಬಂಟಿ?'

ಬಂಟಿ: ಚಿಕನ್ ಜೊತೆ ಚಪಾತಿ ತಿಂತಿದ್ದೀನಿ.

★★★

ಹೆಂಡತಿ: (ವಿಜಯೋತ್ಸಾಹದಲ್ಲಿ) ರೀ ನಾನು ಈವತ್ತು ಒಂದು ರೂಪಾಯಿಗೆ ಮೂರು ಈರುಳ್ಳಿ ತಂದೆ.

ಗಂಡ: ಎಲ್ಲಿಂದ?

ಹೆಂಡತಿ: ಒಂದನ್ನು ದುಡ್ಡು ಕೊಟ್ಟು ತಗೊಂಡೆ. ಇನ್ನೊಂದನ್ನು ಕದ್ದು ತಂದೆ....

ಗಂಡ: ಮತ್ತೆ ಮೂರನೇದು?

ಹೆಂಡತಿ: ಮೂರನೇದನ್ನು ಈರುಳ್ಳಿ ಗಾಡಿಯವನು ನಾನು ಕದ್ದಿದ್ದಕ್ಕೆ ನನ್ನ ಮೇಲೆ ಎಸೆದ.

(ಸಂಗ್ರಹ) **ಪೂರ್ಣಿಮಾ ರವಿಂದ್ರನಾಥ್ ಸಾಂಗ್ಲಿ**

ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ



ಪಂಡಿತ
ಶ್ರೀ ಎಂ. ಬಿ. ಜೋಶಿ
ಪ್ರಸಿದ್ಧ ಜ್ಯೋತಿಷ್ಯರು
ಶ್ರೀ ರಾಘವೇಂದ್ರ ಸ್ವಾಮಿ ಉಪಾಸಕರು
ಶ್ರೀ ಚೌಡೇಶ್ವರಿದೇವಿ ಆರಾಧಕರು
9611002265

ಹಸ್ತ ರೇಖೆ, ಮುಖ ಲಕ್ಷಣ ಮತ್ತು ಭಾವಚಿತ್ರದ ಮೇಲೆ ನಿಮ್ಮ ಭವಿಷ್ಯವನ್ನು ನಿಖರವಾಗಿ ನುಡಿಯುತ್ತಾರೆ. ವಿದ್ಯೆ, ಪರೀಕ್ಷೆ, ಉದ್ಯೋಗ, ಪ್ರಮೋಶನ್, ವಿದೇಶ ಪ್ರವಾಸ, ಪ್ರೇಮ ಪ್ರಕರಣ ಸಂತಾನ ಪ್ರಾಪ್ತಿ, ಸಾಲ ಮುಕ್ತಿ, ರೋಗಗಳು ಲಕ್ಷ್ಮೀ ಯೋಗ, ಭಾಗ್ಯೋದಯ, ಸ್ತ್ರೀವಶೀಕರಣ, ಪುರುಷ ವಶೀಕರಣ ಮಾಟ-ಮಂತ್ರ, ನಿವಾರಣೆ, ಮದುವೆ, ಅಡ-ತಡೆ, ನ್ಯಾಯಾಲಯ ಪ್ರಕರಣಗಳು, ವಿವಾಹ ವಿಚ್ಛೆದನ ಮುಂತಾದ

ಇನ್ನೂ ಅತೀ ಜಟೀಲ ಸಮಸ್ಯೆಗಳಿಗೆ ಅತೀ ಶೀಘ್ರ ಪರಿಹಾರ ಮಾಡುತ್ತಾರೆ.

ಅನೇಕ ರಾಜಕೀಯ ಗಣ್ಯರು, ಉದ್ಯಮಿಗಳು, ನೌಕರಸ್ಥರು, ಜೋಶಿಯವರಿಂದ ಲಾಭ ಪಡೆದಿರುತ್ತಾರೆ.

ನೀವು ಹಲವಾರು ಜ್ಯೋತಿಷ್ಯರನ್ನು ಕೇಳಿ ನಿಮ್ಮ ಸಮಸ್ಯೆಗಳಿಗೆ ಪರಿಹಾರ ಸಿಗದೆ ನೊಂದಿದ್ದರೆ ಅಂತಹ ಯಾವುದೇ ಕಠಿಣ ಸಮಸ್ಯೆಗಳಿದ್ದರು ಪರಿಹಾರ ಶತಸಿದ್ಧ.

ನಿಮ್ಮ ಸಮಸ್ಯೆಗಳನ್ನು ಗುಪ್ತವಾಗಿ ಇಡಲಾಗುವುದು.

ಆಫೀಸ: ಧಮ್ಮಣಗಿ ಪ್ರೇಸ್ಟೀಜ್ ಪ್ಲಾಜಾ ಎಫ್ 13, ಹೊಟೇಲ ಆಯೋಧ್ಯ ಪಕ್ಕದಲ್ಲಿ, ಹಳೇ ಬಸ್‌ಸ್ಟ್ಯಾಂಡ್ ಎದುರು, ಹುಬ್ಬಳ್ಳಿ.

ಮನೆ: ಶ್ರೀ ಶ್ರೀನಿವಾಸ ಅನುಗ್ರಹ ಪಿ.ಎನ್.ಟಿ. ಕಾಲನಿ, ಹೇಮಂತನಗರ, ಕೇಶ್ವಾಪುರ, ಹುಬ್ಬಳ್ಳಿ-23.

0836-2282265
E-mail: mbjoshiastro@gmail.com